# ಹರಳಯ್ಯನವರ ಚಿಲುಮೆ

ಮಹಾಶರಣ ಹರಳಯ್ಯ ಮತ್ತು ಕಲ್ಯಾಣಮ್ಮನವರ ಮೈಚರ್ಮದಿಂದ ವಿಶ್ವಗುರು ಬಸವೇಶ್ವರರಿಗೆ ಮಾಡಿದ ಚಮ್ಮಾವುಗೆಯನ್ನು ಮಧುವರಸ ಅಹಂಕಾರದಿಂದ ಮೆಟ್ಟಿದ ತಕ್ಷಣ ಮೈ ಉರಿ ಕಾಣಿಸಿಕೊಂಡಿತಂತೆ. ಪರಿಹಾರಕ್ಕೆ ಬಸವೇಶ್ವರರ ಆದೇಶದಂತೆ ಹರಳಯ್ಯ ಮತ್ತು ಕಲ್ಯಾಣಮ್ಮನವರು ಕರಿಬಾನೆ ನೀರನ್ನು ಮಧುವರಸರ ಮಗಳು ಲಾವಣ್ಯವತಿಗೆ ನೀಡುತ್ತಿರುವ ಸುಂದರ ಕಲಾಕೃತಿಯನ್ನು ಬೀದರ ಜಿಲ್ಲೆಯ ಬಸವಕಲ್ಯಾಣದ ಮಹಾಮನೆಯಲ್ಲಿ ನಿರ್ಮಿಸಲಾಗಿದೆ.

**-ಗುರುರಾಜ ಬ.ಕನ್ನೂರ, ಬಸವನಬಾಗೇವಾಡಿ**





# ನೋಟಿನ ಹಾರದ ಹರಕೆ!

ಗಾಣಗಟ್ಟೆ ಶ್ರೀ ಮಾಯಮ್ಮದೇವಿ ಉತ್ತರ ಮತ್ತು ಮಧ್ಯಕರ್ನಾಟಕದ ಶಕ್ತಿ ದೇವತೆ. ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿರುವ ಇದು ಚಿತ್ರದುರ್ಗದಿಂದ 25 ಕಿ.ಮೀ.ದೂರವಿದೆ. ಇದೊಂದು ವಿಶಿಷ್ಟ ಕ್ಷೇತ್ರವಾಗಿದೆ. ತಾವು ಬೇಡಿಕೊಂಡ ಹರಕೆ ಈಡೇರಿದರೆ ದೇವಿಗೆ ನೋಟುಗಳ ಹಾರ ಹಾಕುತ್ತಾರೆ. ದೇವಿಯ ಕತ್ತಿನಲ್ಲಿ ಬೇರೆ ಬೇರೆ ಮೌಲ್ಯದ ನೋಟುಗಳು ವಿಜೃಂಭಿಸುತ್ತವೆ.

**-ಪ್ರಕಾಶ ಎಸ್.ಮನ್ನಂಗಿ, ಹಾವೇರಿ**

# ದೇವರಿಗೆ ಕೊಟ್ಟ ದೂರು

ಇತ್ತೀಚೆಗೆ ಕಡತ ವಿಲೇವಾರಿ ಮಾಡುವಾಗ ಈ ಪತ್ರ ಸಿಕ್ಕಿತು. 1976ರಲ್ಲಿ ನಮ್ಮ ತಂದೆಯವರು ನಮಗೆ ಹಣ ಹಿಂತಿರುಗಿಸದೇ ಮೋಸಮಾಡಿದವನ ಕುರಿತು ಧರ್ಮಸ್ಥಳದ ಮಂಜುನಾಥನ ಸನ್ನಿಧಿಯಲ್ಲಿ ದೂರು (ಹೊಯ್ಲು) ಕೊಟ್ಟು ಪಡೆದ ಪತ್ರವಿದು. ಯಾವುದೇ ಕೋರ್ಟು ಕಚೇರಿಯಿಲ್ಲದೇ ಈಗಲೂ ಧರ್ಮಸ್ಥಳದ ದೈವ ಸನ್ನಿಧಿಯಲ್ಲಿ ಅಸಂಖ್ಯ ಪ್ರಕರಣಗಳು ಸರ್ವಸಮ್ಮತದಿಂದ ಇತ್ಯರ್ಥವಾಗುತ್ತಿವೆ.

**-ಕೆ.ಶ್ರೀನಿವಾಸರಾವ್, ದಾವಣಗೆರೆ**



I. R. No. 918/28·12·76

ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು,
ಪೋಸ್ಟು—ಧರ್ಮಸ್ಥಳ, ದಕ್ಷಿಣ ಕನ್ನಡ.

Phone: 1 RESIDENCE
2 OFFICE

O. R. No. 286

ತಾ 28 · 12 · 76.

ಹೊಯ್ಲು ನಂಬ್ರ 173/76·77 ॥ ಶ್ರೀ ಮಂಜುನಾಥ ಪ್ರಸನ್ನ ॥

ನೀವಿಲ್ಲಿ ತಾ. 22:12:76 ರಲ್ಲು ಹಾಜ್ರು ಪಡಿಸಿದ ಹೊಯ್ಲು ಪತ್ರ 1 ತಲ್ಪಿ ಇಲ್ಲಿ ದಾಕ್ಲುಮಾಡಿಕೊಂಡಿರುತ್ತದೆ. ಎದ್ರಿಯವರು ಇಲ್ಲಿ ಬಂದು ಸತ್ಯವಿದ್ದಂತೆ ತೀರ್ಮಾನಿಸಿಕೊಳ್ಳಲು ಸ್ಥಳ ಪದ್ಧತಿಯಂತೆ ತಿಳಿಸಿಯದೆ. ಆದರಂತೆ ಎದ್ರಿಯವರು ಇಲ್ಲಿ ಬರುವ ವೇಳೆ ನಿಮ್ಮನ್ನು ಅವರು ಇಲ್ಲಿ ಬರುವಂತೆ ತಿಳಿಸಿದಲ್ಲಿ ನೀವಿಲ್ಲಿಗೆ ಬಾರದಿದ್ದರೆ ಶ್ರೀ ಸ್ವಾಮಿಯ ಸನ್ನಿಧಿಯಲ್ಲಿ ಹಾಜರಾಗುವ ಎದ್ರಿಯವರ ಪ್ರಾಮಾಣಿಕವಾದ ಹೇಳಿಕೆಯನ್ನು ಅನುಸರಿಸಿ ಯುಕ್ತ ತೋರುವಂತೆ ತೀರ್ಮಾನಿಸಲಾದೀತೆಂಬ ವಿವರ ತಿಳಿದಿರುವುದು. ಈ ಕುರಿತು ಪತ್ರವ್ಯವಹಾರ ಮಾಡುವಾಗ ಹೊಯ್ಲು ನಂಬ್ರ, ಇಸವಿ ತಪ್ಪದೆ ನಮೂದಿಸಬೇಕು ಮತ್ತು ತೀರ್ಮಾನವಾಗುವಾಗ ಈ ಕಾರ್ಡು ತರುವುದು. ಈ ಹೊಯ್ಲು ತೀರ್ಮಾನವಾಗುವವರೇಗೆ ಈ ಕಾರ್ಡು ಬಿಸಾಡಬಾರದು. ಶ್ರುತವಿರಲಿ.

DHARMASTALA